SRI B. SUBBAYYA SHETTY (Minister for Education).—

(*a*)—

(1) Injahalli
(2) Hallammanahalli
(3) Gazalpur
(4) Mailwar
(5) Bhimsagar

(*b*) Nil

(*c*) Nil

(*d*) Nil

(*e*) Nil

(*f*) Dose not arise

(*g*) Nil

ತುಮಕೂರು ಜಿಲ್ಲೆಯ ಕುಣಿಗಲ್ ತಾಲ್ಲೂಕು. ಅಮೃತೂರಿನಿಂದ ಮಂಡ್ಯಕ್ಕೆ ಹೋಗುವ ರಸ್ತೆಯನ್ನು ಅಭಿವೃದ್ಧಿಪಡಿಸುವುದು

೧೧. ಶ್ರೀ ಡಿ. ಟಿ. ಮಾಯಣ್ಣ (ಹುಲಿಯೂರುದುರ್ಗ)—ನಿ ಲೋಕೋಪಯೋಗಿ ಮಂತ್ರಿಗಳು ಈ ವಿಷಯವನ್ನು ದಯೆಯಿಟ್ಟು ತಿಳಿಸುವರೆ.—

(ಅ) ತುಮಕೂರು ಜಿಲ್ಲೆಯ ಕುಣಿಗಲ್ ತಾಲ್ಲೂಕು, ಅಮೃತೂರಿನಿಂದ ಮಂಡ್ಯಕ್ಕೆ ಹೋಗುವ ರಸ್ತೆಯಲ್ಲಿರುವ (೧) ಅಮೃತೂರು (೨) ಹೊಸಕೆರೆ (೩) ಜಿನ್ನಾಗರ (೪) ಸಣಬ (೫) ಕೊಪ್ಪ (೬) ಹಂಚೀಪುರ (೭) ಯಣವಣ್ಣೆ ಗ್ರಾಮಗಳಿಗೆ ಈ ರಸ್ತೆಯಲ್ಲಿ ಓಡಾಡುವ ಬಸ್ಸುಗಳ ಧೂಳಿನಿಂದ ತೊಂದರೆಯಾಗುತ್ತಿರುವುದು ಸರಕಾರದ ಗಮನಕ್ಕೆ ಬಂದಿರುವುದೇ ;

(ಆ) ಈ ರಸ್ತೆಯನ್ನು ಅಭಿವೃದ್ಧಿಪಡಿಸಿ ಸರಕಾರ ತಕ್ಷಣ ರಸ್ತೆಗೆ ತಾರನ್ನು ಹಾಕಲು ಕ್ರಮ ಕೈಗೊಳ್ಳುತ್ತಾರೆಯೇ ?

ಶ್ರೀ ಎಸ್. ಬಂಗಾರಪ್ಪ (ಲೋಕೋಪಯೋಗಿ ಮಂತ್ರಿಗಳು).—

ಉತ್ತರ—(ಅ) ಸರ್ಕಾರದ ಗಮನಕ್ಕೆ ಬಂದಿದೆ.

(ಆ) ಈ ರಸ್ತೆಗೆ ಅಭಿವೃದ್ಧಿಪಡಿಸುವ ಮತ್ತು ಟಾರು ಹಾಕುವ ಕಾರ್ಯಕ್ರಮಗಳನ್ನು ಹಂತ ಹಂತವಾಗಿ ಹಣ ಒದಗಿದ ಹಾಗೆ ತೆಗೆದುಕೊಳ್ಳಲಾಗುವುದು.

ತುಮಕೂರು ಜಿಲ್ಲೆಯ ಕುಣಿಗಲ್ ತಾಲ್ಲೂಕು, ಅರಮನೆ ಹೊನ್ನಮಾಚನಹಳ್ಳಿಯ ಹೊಸಕೆರೆ ಕಟ್ಟುವುದು

೧೨. ಶ್ರೀ ಡಿ. ಟಿ. ಮಾಯಣ್ಣ (ಹುಲಿಯೂರುದುರ್ಗ).— ಮುಖ್ಯ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ.—

(ಅ) ತುಮಕೂರು ಜಿಲ್ಲೆಯ ಕುಣಿಗಲ್ ತಾಲ್ಲೂಕು, ಅರಮನೆ ಹೊನ್ನಮಾಚನಹಳ್ಳಿಯ ಹೊಸಕೆರೆಯನ್ನು ಕಟ್ಟಲು ಪ್ರಾರಂಭಿಸಿ ಎಷ್ಟು ವರ್ಷಗಳಾದುವು ;

(ಆ) ಸರಕಾರ ಕೂಡಲೇ ಈ ಕೆರೆಯನ್ನು ಕಟ್ಟಿ ಪೂರೈಸುವುದೇ ?